# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 4-2-2023



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


### ಭಾರತ ಅಕ್ಟೋಬರ್ 2022 ರಿಂದ ಜನವರಿ 2023 ಅವಧಿಯ ಸಕ್ಕರೆ ಉತ್ಪಾದನೆ 3.42 ಶೇಕಡಾ ಹೆಚ್ಚಳ

2022-23 ನೇ ಸಾಲಿನ ಪ್ರಥಮ 4 ತಿಂಗಳ ಭಾರತದ ಸಕ್ಕರೆ ಉತ್ಪಾದನೆ ಹಿಂದಿನ ವರ್ಷದ ಇದೇ ಅವಧಿಗಿಂತ 3.4 ಶೇಕಡಾ ಹೆಚ್ಚಳದೊಂದಿಗೆ 193.5 ಲಕ್ಷ ಟನ್‌ಗಳಿಗೇರಿದೆಯೆಂದು ISMA ಪ್ರಕಟಣೆ ಹೇಳಿದೆ. ಹಿಂದಿನ ವರ್ಷ ಇದೇ ಅವಧಿಯ ಉತ್ಪಾದನೆ 187.1 ಲಕ್ಷ ಟನ್ ಗಳಾಗಿತ್ತು.

### ಸಾಕಷ್ಟು ಬೇಳೆಕಾಳು, ತೊಗರಿಬೇಳೆ ಆಮದು

ಭಾರತ ಈ ವರ್ಷ ಸಾಕಷ್ಟು ತೊಗರಿಬೇಳೆ ಆಮದು ಮಾಡಲಿದೆಯೆನ್ನಲಾಗಿದೆ. 1 ಮಿಲಿಯನ್ ಟನ್‌ಗಳಿಗೂ ಹೆಚ್ಚು ತೊಗರಿಬೇಳೆ ಆಮದಾಗಬಹುದೆನ್ನಲಾಗಿದೆ. ಆಫ್ರಿಕಾ, ಮ್ಯನ್ಮಾರ್ ಮುಂತಾದ ದೇಶಗಳಲ್ಲಿ ಸಾಕಷ್ಟು ಲಭ್ಯತೆಯಿದ್ದು ಅಲ್ಲಿಂದ ಆಮದಾಗಲಿದೆಯೆನ್ನಲಾಗಿದೆ. ತೊಗರಿಬೇಳೆ ಹಾಗೂ ಉದ್ದಿನಬೇಳೆ ಆಮದಾಗಬಹುದು. ಪ್ರತಿಕೂಲ ಹವಾಮಾನದಿಂದ ಭಾರತದ ಖಾರೀಫ್ ಬೆಳೆಯಲ್ಲಿ ತೊಗರಿ, ಉದ್ದು ಉತ್ಪಾದನೆ ಇಳಿಕೆಯಾಗಿತ್ತು. ಸಾಕಷ್ಟು ಆಮದಾಗುತ್ತಿರುವುದರಿಂದ ದರ ನಿಯಂತ್ರಣದಲ್ಲಿದ್ದು, ಹೆಚ್ಚಿನ ಹೆಚ್ಚಳವಾಗಿಲ್ಲ. ಸರಕಾರಿ ದಾಸ್ತಾನಿನಿಂದ ವಿವಿಧ ಶರ್ತಗಳೊಂದಿಗೆ ಸಾಕಷ್ಟು ಬೇಳೆಕಾಳು ಪಡಿತರ ವಿತರಣೆ ರಾಜ್ಯಗಳ ಮೂಲಕ, ಎಥೆನಾಲ್ ಉತ್ಪಾದನೆ, ಖಾಸಗಿಯವರಿಗೆ ಇತ್ಯಾದಿ ವಿಭಾಗಗಳಲ್ಲಿ ಬಿಡುಗಡೆಯಾಗಿದೆಯೆನ್ನಲಾಗಿದೆ. ಬಜೆಟ್ನ್ನು ಬೇಳೆಕಾಳು ವಿಭಾಗಕ್ಕೆ ಹೆಚ್ಚು ಅನದಾನ ಬಿಡುಗಡೆಯಾಗಿದೆಯೆನ್ನಲಾಗಿದೆ.

### 2023-24 ರ ಬ್ರೆಜಿಲ್‌ನ ಕಾಫಿ ಉತ್ಪಾದನೆ 10 ಶೇಕಡಾ ಹೆಚ್ಚಳ ಸಾಧ್ಯತೆ

2023-24 ರ ಸಾಲಿನಲ್ಲಿ ಬ್ರೆಜಿಲ್‌ನ ಕಾಫಿ ಉತ್ಪಾದನೆ 10 ಶೇಕಡಾ ಹೆಚ್ಚಳಗೊಂಡು 60 ಕೆ.ಜಿ.ಯ 64 ಮಿಲಿಯನ್ ಚೀಲಗಳಾಗಬಹುದೆಂದು ಅಂದಾಜಿಸಲಾಗಿದೆ. ಇದು ಹಿಂದಿನ ಸಾಲಿನ ಉತ್ಪಾದನೆಗಿಂತ 10 ಶೇಕಡಾ ಹೆಚ್ಚಳ. ಕಾಫಿ ಟ್ರೇಡರ್ COMEXIM ಇದನ್ನು ಅಂದಾಜಿಸಿದ್ದು, ಅರೆಬಿಕಾ ಉತ್ಪಾದನೆ 15 ಶೇಕಡಾ ಹೆಚ್ಚಳದೊಂದಿಗೆ 41.3 ಮಿಲಿಯನ್ ಚೀಲ ಹಾಗೂ ರಾಬೆಸ್ಟಾ 22.7 ಮಿಲಿಯನ್ ಚೀಲಗಳಾಗಬಹುದೆನ್ನಲಾಗಿದೆ. ಹಾಗೆಯೇ 2022-23 ರ ಬ್ರೆಜಿಲ್ ಕಾಫಿ ಉತ್ಪಾದನಾ ಅಂದಾಜನ್ನು 63.2 ಮಿಲಿಯನ್ ಚೀಲಗಳಿಂದ 58.05 ಮಿಲಿಯನ್ ಚೀಲಗಳಿಗೆ ಇಳಿಕೆ ಮಾಡಿದೆ.

## ಅಡಿಕೆ ದರ ದುರ್ಬಲ ಸ್ಥಿತಿ ಮುಂದುವರಿಕೆ

ಮಂಗಳೂರು ಮಾರುಕಟ್ಟೆಯಲ್ಲಿ ಚಾಲಿ ಹಾಗೂ ಚೋಲ್‌ಗೆ ಬೇಡಿಕೆ ಇಳಿಕೆಯಿಂದ ದರ ದುರ್ಬಲ ಸ್ಥಿತಿಯಲ್ಲಿ ಮುಂದುವರಿಯುತ್ತಿದ್ದು, ದರ ಇಳಿಕೆಯ ಹಾದಿಯಲ್ಲಿದೆ. ಮಾರುಕಟ್ಟೆಗೆ ಆವಕವೂ ಇಳಿಕೆಯಾಗಿದೆಯೆನ್ನಲಾಗಿದೆ.

## ಕಾಂಬೋಡಿಯಾದ ಈ ವರ್ಷ ಕಚ್ಚಾ ಗೋಡಂಬಿ ಉತ್ಪಾದನೆ 1 ಮಿಲಿಯನ್ ಟನ್‌ಗಳ ನಿರೀಕ್ಷೆ

ಕಾಂಬೋಡಿಯಾದ ಈ ವರ್ಷದ ಕಚ್ಚಾ ಗೋಡಂಬಿ ಉತ್ಪಾದನೆ 1 ಮಿಲಿಯನ್ ಟನ್‌ಗಳಾಗಬಹುದೆನ್ನಲಾಗಿದೆ. ಹಿಂದಿನ ವರ್ಷದ ಉತ್ಪಾದನೆಗಿಂತ ಹೆಚ್ಚಳವಾಗಲಿದೆಯೆನ್ನಲಾಗಿದೆ